ಸಾಕ್ಷಿಯನ್ನು ದಿಃ 09.10.2023 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ 3 ನೇ ಎದುರುದಾರರ ಪರ ವಕೀಲರಿಂದಃ

ಅಪಘಾತ ಆದ ದಿನ ನಾನು ಟಾಟಾ ಜೆನಾನ್ ವಾಹನದಲ್ಲಿ ಹೋಗುತ್ತಿದ್ದೆ. ಸದರಿ ವಾಹನದಲ್ಲಿ ಚಾಲಕ ಸೇರಿ ನಾವು 5 ಜನ ಹೋಗುತ್ತಿದ್ದೇವು. ಸದರಿ ವಾಹನ ನನ್ನ ಸಂಬಂಧಿಕರಾದ ವಾಸುದೇವ ಇವರಿಗೆ ಸೇರಿದ್ದು. 2 ನೇ ಎದುರುದಾರರು ಲೇಬರ್ ಕಾಂಟ್ರಾಕ್ಟ್ ಇರುತ್ತಾರೆ. ಪ್ರಶ್ನಿತ ವಾಹನಕ್ಕೂ 2 ನೇ ಎದುರುದಾರರಿಗೂ ಸಂಬಂಧ ಇಲ್ಲ ಎಂದರೆ ಸಾಕ್ಷಿಯು ನಾನು ಕಾರನ್ನು ವಾಸುದೇವ್ ರವರಿಂದ ಪಡೆದುಕೊಂಡು ಹೋಗಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ಪ್ರಶ್ನಿತ ವಾಹನದ ಪಾಲಿಸಿಯನ್ನು 3 ನೇ ಎದುರುದಾರಿಂದ ಪಡೆದುಕೊಂಡಿದ್ದಾರೋ ಇಲ್ಲವೋ ಎಂದು ನಾನು ಪಾಲಿಸಿ ಕಾಪಿಯನ್ನು ನೋಡಿರುವುದಿಲ್ಲ. 2 ನೇ ಎದುರುದಾರರ ಹೆಸರಿನಲ್ಲಿ ಅಪಘಾತ ಸಮಯದಲ್ಲಿ ಪಾಲಿಸಿ ಇರಲಿಲ್ಲ, ಪಾಲಿಸಿದಾರರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ಅಪಘಾತದಲ್ಲಿ ನನಗೆ ಏಟಾಗಿರುವುದಿಲ್ಲ ಎಂದರೆ ಸರಿಯಲ್ಲ. ಆ ಬಗ್ಗೆ ದಾಖಲೆ ಹಾಜರು ಪಡಿಸಿರುತ್ತೇನೆ. ಅಪಘಾತ ಆದ ನಂತರ ಎನ್.ಹೆಚ್. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ದೋಷರೋಪಣಾ ಪಟ್ಟಿಯಲ್ಲಿ ನನ್ನನ್ನು ಪ್ರತ್ಯಕ್ಷದರ್ಶಿ ಎಂದು ತೋರಿಸಿದ್ದು ಗಾಯಳು ಎಂದು ತೋರಿಸಿರುವುದಿಲ್ಲ ಎಂದರೆ ಅಪಘಾತದಿಂದ ನನಗೆ ಗಾಯ ಆಗಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ನಾನು ಜೆ.ಕೆ ಟೈಲ್ಸ್ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದು ಹೇಳಿದ್ದು ನನಗೆ ಇ.ಎಸ್.ಐ ಸೌಲಭ್ಯ ಇದೆ ಎಂದರೆ ಸರಿಯಲ್ಲ. ಇ.ಎಸ್.ಐ ಸೌಲಭ್ಯ ಇಲ್ಲದವರಿಗೆ ಕಾರ್ಖಾನೆಯಿಂದ ವಿಮಾ ಸೌಲಭ್ಯ ಸಿಗುತ್ತದೆ ಎಂದರೆ ಸರಿ. ನನಗೆ ಅಪಘಾತದಿಂದ ಗಾಯ ಆಗದೇ ಇರುವ ಕಾರಣ ಚಿಕಿತ್ಸೆ ಪಡೆದುಕೊಂಡ ಬಗ್ಗೆ ದಾಖಲೆ ಹಾಜರು ಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ದಾಖಲೆ ಕೊಟ್ಟಿದ್ದೇನೆ ಎಂದು ಉತ್ತರಿಸಿರುತ್ತಾರೆ. ಈಗಲೂ ನಾನು ಜೆ.ಕೆ ಟೈರ್ಸ್ ನಲ್ಲಿ ಕೆಲಸಕ್ಕೆ ಹೋಗುತ್ತಿದ್ದೇನೆ ಎಂದರೆ ಸರಿ. ಅಪಘಾತಕ್ಕೂ ಮೊದಲು ಬರುತ್ತಿದ್ದ ಸಂಬಳಕ್ಕಿಂತ ಈಗೆ ಹೆಚ್ಚಿನ ಸಂಬಳ ಬರುತ್ತಿದೆ ಎಂದರೆ ಸರಿ. ಸದರಿ ಪ್ರಶ್ನಿತ ಕಾರಿನಲ್ಲಿ ಯಾವ ಕಾರಣಕ್ಕಾಗಿ ಪ್ರಯಾಣ ಮಾಡುತ್ತಿದ್ದೆ ಎಂದು ಅರ್ಜಿಯಲ್ಲಾಗಲೀ ಪ್ರಮಾಣ ಪತ್ರದಲ್ಲಾಗಲೀ ಹೇಳಿರುವುದಿಲ್ಲ ಎಂದರೆ ಸರಿ.

ಕಾರಿನಲ್ಲಿ ಸೀಟ್ ಬೆಲ್ಟ್ ಹಾಕಿಕೊಂಡಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಕಾರಿನಲ್ಲಿ ನಾವು 5 ಜನಕ್ಕಿಂತ ಹೆಚ್ಚು ಜನ ಪ್ರಯಾಣಿಸುತ್ತಿದ್ದೇವು ಎಂದರೆ ಸರಿಯಲ್ಲ. ಸದರಿ ಅಪಘಾತದಲ್ಲಿ ನನಗೆ ಯಾವುದೇ ಗಾಯ ಆಗಿರುವುದಿಲ್ಲ ಎಂದು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಕೆ ಓದಿ ತಿಳಿಸಿದಾಗ ಸಾಕ್ಷಿ ನಾನು ಆ ರೀತಿ ಹೇಳಿಕೆ ನೀಡಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ಅಪಘಾತವು ನನ್ನ ನಿಲರ್ಕ್ಷತನದಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ಕಾರ್ ಚಾಲಕನ ತಪ್ಪಿನಿಂದ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಪರಿಹಾರಕ್ಕಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಕಾರಿನಲ್ಲಿ ಪ್ರಯಾಣ ಮಾಡುತ್ತಿದ್ದವರು ನಾವು ಸಂಬಂಧಿಕರು ಎಂದರೆ ಸರಿ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು

ಮತ್ತು ಎಂ.ಎ.ಸಿ.ಟಿ., ಮೈಸೂರು.